**ದಿನಾಂಕ:14.03.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

5. ಆರೋಪಿಯು ನನಗೆ ಹಣ ಕೊಡಬೇಕು ಎಂದು ತೋರಿಸಲು ಚೆಕ್ಕನ್ನು ಹಾಜರುಪಡಿಸಿದ್ದೇನೆ. ನಾನು ಯಾವುದೇ ವ್ಯವಹಾರ ಮಾಡಬೇಕಾದರೆ ನಗದು ರೂಪದಲ್ಲಿ ಮತ್ತು ಚೆಕ್ಕಿನ ಮುಖಾಂತರ ಮಾಡುತ್ತೇನೆ. ನಾನು ದಾಖಲೆಗಳನ್ನು ಬ್ಯಾಂಕ್ ವಿವರಗಳಲ್ಲಿ ಇಟ್ಟಿರುತ್ತೇನೆ. ನಾನು ಸಾಲ ಕೊಟ್ಟ ಬಗ್ಗೆ ಒಂದು ಪುಸ್ತಕದಲ್ಲಿ ಬರೆದುಕೊಳ್ಳುತ್ತೇನೆ. ಅದು ನನ್ನ ಬಳಿ ಇದೆ. ಈ ಪ್ರಕರಣದ ವ್ಯವಹಾರ ನಡೆದ ವರ್ಷಕ್ಕೆ ಸಂಬಂಧಪಟ್ಟ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

6. ಆರೋಪಿಯು ನಡೆಸುತ್ತಿರುವ ಪಿ.ಜಿಯ ಹಾಸ್ಟೆಲ್‌ನ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಆರೋಪಿ ಮತ್ತು ಸದರಿ ಕಟ್ಟಡ ಮಾಲೀಕರ ನಡುವೆ ನಡೆದ ದಾವೆಯ ಬಗ್ಗೆ ನನಗೆ ಗೊತ್ತಿಲ್ಲ. ಸದರಿ

ಕಟ್ಟಡದ ಮಾಲೀಕರ ಹೆಸರು ಮುನಿಕೃಷ್ಣ ಎಂದರೆ ನನಗೆ ಗೊತ್ತಿಲ್ಲ. ಸದರಿ ಕಟ್ಟಡದ ಮಾಲೀಕರಿಗೆ ಮತ್ತು ಆರೋಪಿಯ ಮಧ್ಯೆ ವಿವಾದವಿದ್ದು ಆರೋಪಿ ಅವರಿಗೆ ನೀಡಿದ ಚೆಕ್ಕನ್ನು ನನ್ನ ಮುಖಾಂತರ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**(ಸೋಮಶೇಖರ.ಎ)**
**ಎಸಿಎಂಎಂ ನ್ಯಾಯಾಧೀಶರು**
**ಲಘು ವ್ಯವಹಾರಗಳ ನ್ಯಾಯಾಲಯ**
**ಬೆಂಗಳೂರು**